# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮೂಡಲಗಿ.

ಸಿ.ಸಿ. ನಂಃ **429/2014**

ಸಿ.ಡಬ್ಲ್ಯೂ- 7
ಪಿ.ಡಬ್ಲ್ಯೂ- 7

**ದಿನಾಂಕಃ 18-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ವಿಲಾಸ ಕೇಳಕರ |
| ತಂದೆಯ/ಗಂಡನ ಹೆಸರು | : ಶಂಕರ |
| ವಯಸ್ಸು | : 74 ವರ್ಷ |
| ಉದ್ಯೋಗ | : ನಿವೃತ್ತ ನೌಕರ |
| ವಾಸ ಸ್ಥಳ | : ಸಾಧನಕೇರಿ, ಧಾರವಾಡ |
| ತಾಲೂಕು | : ಧಾರವಾಡ |

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ ರವರಿಂದ:-**

ಚಾಸಾ 1 ನನ್ನ ಅಳಿಯ, ಚಾಸಾ 5 ನನ್ನ ಸೊಸೆ. ಚಾಸಾ 6 ಬಲಭೀಮ ವಿದ್ಯಾಪ್ರಸಾರಕ ಸಮಿತಿಯ ಕಾರ್ಯದರ್ಶಿ ಆಗಿದ್ದರು. ಚಾಸಾ 1 ರವರು ಬಲಭೀಮ ವಿದ್ಯಾಪ್ರಸಾರಕ ಸಮಿತಿಯ ಉಪಾಧ್ಯಕ್ಷರು, ಚಾಸಾ 5 ರವರು ಬಲಭೀಮ ವಿದ್ಯಾಪ್ರಸಾರಕ ಸಮಿತಿಯ ಅಧ್ಯಕ್ಷರು ಆಗಿದ್ದರು. ನಾನು ಸದರಿ ಸಮಿತಿಯಲ್ಲಿ 2005 ರಿಂದ ಇಲ್ಲಿಯವರೆಗೂ ಮತ್ತು ಈಗಲೂ ಸಹ director ಆಗಿರುತ್ತೇನೆ. ಮಾನ್ಯ ನ್ಯಾದ ಮುಂದಿರುವ ಆರೋಪಿ ನನಗೆ ಪರಿಚಯವಿದ್ದು, ಆತ ಕೇಳಕರ ಪ್ರೌಢ ಶಾಲೆಯಲ್ಲಿ 2003 ರಿಂದ 2011 ರವರೆಗೆ ಮುಖ್ಯ ಉಪಾಧ್ಯಾಯರಾಗಿ ಕೆಲಸ ಮಾಡಿರುತ್ತಾರೆ. ಬಲಭೀಮ ವಿದ್ಯಾ ಪ್ರಸಾರಕ ಸಮಿತಿ ಕುಲಗೋಡ ಕೇಳಕರ ಅವರಿಗೆ ಸೇರಿದ ಸಂಸ್ಥೆಯಾಗಿದ್ದು, ಸದರಿ ಸಂಸ್ಥೆಯ ಅಡಿಯಲ್ಲಿ ಕೇಳಕರ ಪ್ರೌಢ ಶಾಲೆ ಸ್ಥಾಪನೆಯಾಗಿತ್ತು.

2003 ರಲ್ಲಿ ಆರೋಪಿ ನಮ್ಮ ಶಾಲೆಯ ಮುಖ್ಯ ಉಪಾದ್ಯಾಯರಾಗಿದ್ದು, 2003 ರಿಂದ ಆರೋಪಿ ನಮ್ಮ ಶಾಲೆಯ ಮಕ್ಕಳ fees ಹಣವನ್ನು ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ 2010 ರಲ್ಲಿ ಸಂಸ್ಥೆಯ ಆಡಿಟ್ ನ್ನು ವಿಜಯ ಪಂಚಪ್ಪ ಅವರ ಕಡೆಯಿಂದ ಮಾಡಿಸಿದಾಗ ತಿಳಿದುಬಂದಿರುತ್ತದೆ. ಈ ಬಗ್ಗೆ ಚಾಸಾ 1 ರವರು ಆರೋಪಿಯ ವಿರುದ್ಧ ಕುಲಗೋಡ ಪೋಲೀಸ ಠಾಣೆಯಲ್ಲಿ ದೂರು ದಾಖಲಿಸಿರುತ್ತಾರೆ. ಆರೋಪಿ 2008 ರಿಂದ 2011 ರ ವರೆಗಿನ ಒಟ್ಟು ಹಣ 1,71,000/- ಹಣ ದುರುಪಯೋಗಪಡಿಸಿಕೊಂಡಿರುತ್ತಾನೆ. ದೂರು ದಾಖಲಿಸಿದ ನಂತರ ಒಟ್ಟು ಮೂರು ಸಲ ಆರೋಪಿ ಒಟ್ಟು 39,000/- ರೂ. ಹಣವನ್ನು ವಾಪಾಸ ನೀಡಿರುತ್ತಾನೆ. 1,33,271/- (something) ಹಣ ಆರೋಪಿಯಿಂದ ದುರುಪಯೋಗವಾಗಿರುತ್ತದೆ. ಈ ಬಗ್ಗೆ ನಾನು ತನಿಖಾಧಿರಿಗೆ ಹೇಳಿಕೆ ನೀಡಿರುತ್ತೇನೆ.

ಸಿ.ಸಿ. ನಂಃ **429/2014**

ಸಿ.ಡಬ್ಲ್ಯೂ- 7

**ಪಿ.ಡಬ್ಲ್ಯೂ- 7**

**(ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಸಾಕ್ಷಿಯು ನ್ಯಾಯಾಲಯದಲ್ಲಿ ನೀಡಿದ ಹೇಳಿಕೆ ಮತ್ತು ಪೊಲೀಸರ ಮುಂದೆ ನೀಡಿದ ಹೇಳಿಕೆಯನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿಯನ್ನು ನೀಡಲಾಯಿತು)**

**ಪಾಟೀ ಸವಾಲುಃ ಎ.ಪಿ.ಪಿ ರವರಿಂದ:-**

ಆರೋಪಿ ವೆಂಕಪ್ಪ ಉದ್ದಪ್ಪ ರಡೇರಹಟ್ಟಿ ನಮ್ಮ ಶಾಲೆಯ ಮುಖ್ಯ ಉಪಾದ್ಯಾಯರು ಆಗಿದ್ದರು ಎಂದರೆ ಸರಿ. 2008-09 ರವರೆಗೆ ಲೆಕ್ಕ ಪರಿಶೋಧನೆ ಮಾಡಿಸಿರುವುದಿಲ್ಲ ಎಂದು ಆರೋಪಿಗೆ ಈ ಬಗ್ಗೆ ಚಾಸಾ 1 ರವರು ಪತ್ರ ವ್ಯವಹಾರ ಮಾಡಿರುತ್ತಾರೆ ಎಂದರೆ ಸರಿ. ಆರೋಪಿ ಪಿ.ಜಿ. ಗಾಳಿ ಬೆಳಗಾವಿ ಇವರ ಕಡೆಯಿಂದ  ಲೆಕ್ಕ ಪರಿಶೋಧನೆ ಮಾಡಿಸಿರುವುದಾಗಿ ಪತ್ರಕ್ಕೆ ಉತ್ತರ ನೀಡಿರುತ್ತಾರೆ ಎಂದರೆ ಸರಿ. ವಿಜಯ ಪಂಚಪ್ಪ ಅವರಿಂದ  ಆಡಿಟ್ ಮಾಡಿಸಿದ ನಂತರ 1,72,901/- ರೂ. ಹಣವನ್ನು ಆರೋಪಿ ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ನನಗೆ ತಿಳಿದಿರುತ್ತದೆ ಎಂದರೆ ಸರಿ. ಹಣ ದುರ್ಬಳಕೆ ಬಗ್ಗೆ ನಮಗೆ ತಿಳಿದ ನಂತರ ಆತನನ್ನು ದಿಃ 30-06-2011 ರಂದು ಅಮಾನತ್ತಿನಲ್ಲಿ ಇಟ್ಟಿರುತ್ತೇವೆಂದರೆ ಸರಿ.  2003-04 ರಿಂದ 2009 ರವೆರೆಗೆ ಆರೋಪಿ ರೂ.1,72,901.06/- ಹಣ ದುರ್ಬಳಕೆ ಮಾಡಿಕೊಂಡಿದ್ದಾರೆಂದು ನಾನು ತನಿಖಾಧಿಕಾರಿಗೆ ಹೇಳಿರುತ್ತೇನೆಂದರೆ ಸರಿ. ದಿಃ 22-04-2012 ರಂದು ನಾನು ತನಿಖಾಧಿಕಾರಿಗೆ ರೂ.10,270/- ಗಳನ್ನು ಡಿ ಸಿ ಸಿ  ಬ್ಯಾಂಕ ಕುಲಗೋಡಿನಲ್ಲಿ ಜಮಾ ಮಾಡಿದ್ದು, ರೂ.6,060/- ಗಳನ್ನು ಖಜಾನೆಗೆ ತುಂಬಿದ್ದು ಉಳಿದ ರೂ. 1,56,571/- ಗಳನ್ನು ದುರ್ಬಳಕೆ ಮಾಡಿಕೊಂಡಿದ್ದಾರೆಂದು ಹೇಳಿಕೆ ನೀಡಿರುತ್ತೇನೆಂದರೆ ಸರಿ. ದಿಃ 25-05-2012 ರಂದು ಆರೋಪಿ ಎನ್ ಎಸ್ ಸಿ ಪ್ರಮಾಣ ಪತ್ರದ ದಾಖಲಾತಿಯ ಪ್ರಕಾರ ಆರೋಪಿಯು ರೂ.23,300/- ಗಳನ್ನು ಜಮಾ ಮಾಡಿದ್ದು, ರೂ.5,100/- ಗಳನ್ನು ತನ್ನ ಸ್ವಂತಕ್ಕೆ ಬಳಸಿಕೊಂಡಿದ್ದು ಒಟ್ಟು ರೂ. 1,33,271/- ಗಳನ್ನು ದುರ್ಬಳಕೆ ಮಾಡಿಕೊಂಡಿದ್ದಾರೆಂದು ಹೇಳಿಕೆ ನೀಡಿರುತ್ತೇನೆಂದರೆ ಸರಿ. ಆರೋಪಿ ಸಂಸ್ಥೆಯ ಹಣವನ್ನು ತನ್ನ ಸ್ವಂತಕ್ಕೆ ಬಳಸಿಕೊಂಡು ದುರ್ಬಳಕೆ ಮಾಡಿಕೊಂಡು ಸಂಸ್ಥೆಗೆ ಮೋಸ ಮಾಡಿರುತ್ತಾರೆಂದರೆ ಸರಿ.

ಸಿ.ಡಬ್ಲ್ಯೂ- 7
ಪಿ.ಡಬ್ಲ್ಯೂ- 7

**ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ನ್ಯಾಯಯುತವಾದ ದೃಷ್ಟಿಯಿಂದ ಸಮಯ ನೀಡಲಾಯಿತು.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ ದಂ.,
ಮೂಡಲಗಿ.